# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ,
ದಾವಣಗೆರೆ–577 007.

## ವಿದ್ಯಾವಿಷಯಕ ಪರಿಷತ್
## ಅಸಾಮಾನ್ಯ ಸಭೆಯ ನಡಾವಳಿಗಳು
## ದಿನಾಂಕ:27.09.2024

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008

: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಂ :

**ಸಂಖ್ಯೆ: ದಾವಿವಿ/ಪ್ರಾಧಿಕಾರ/ವಿವಿಪ/478/2024–25/ 3435** **ದಿನಾಂಕ:04.09.2024**

**ಗೆ,**

**ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:27.09.2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ನಡಾವಳಿಗಳು.**

*****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ–IIರ ಪ್ರಕರಣ 16(i)ರ ರೀತ್ಯ ದಿನಾಂಕ:27.09.2024 ರಂದು ವಿಶ್ವವಿದ್ಯಾನಿಲಯದ ಎಂ.ಬಿ.ಎ. ಕಟ್ಟಡದ ಸಭಾಂಗಣದಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–II ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

**ಕುಲಸಚಿವರು**

ದಾವಣಗೆರೆ ವಿಶ್ವವಿದ್ಯಾನಿಲಯ

ಶಿವಗಂಗೋತ್ರಿ, ದಾವಣಗೆರೆ-577007

**ಗೆ,**

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ,

**<u>ಪ್ರತಿಗಳು:</u>**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಹಣಕಾಸು/ಪರೀಕ್ಷಾಂಗ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ/ಆರ್.ಎನ್.ಡಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:27.09.2024ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ, ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಶ್ರೀ ಅಬ್ದುಲ್ ಜಬ್ಬಾರ್, ಮಾನ್ಯ ವಿದಾನ ಪರಿಷತ್ತಿನ ಸದಸ್ಯರು : ಸದಸ್ಯರು
3. ಶ್ರೀ ಬಾಬುಕುಮಾರ್ ಓ, ಪ್ರಾಂಶುಪಾಲರು : ಸದಸ್ಯರು
4. ಡಾ. ಗಿರೀಶ್ ಟಿ, ಪ್ರಾಂಶುಪಾಲರು : ಸದಸ್ಯರು
5. ಶ್ರೀ ಭರಮಗೌಡ ಪಾಟೀಲ್, ಪ್ರಾಂಶುಪಾಲರು : ಸದಸ್ಯರು
6. ಡಾ. ಜೋಮನ್ ಕೆ. ಜೆ, ಪ್ರಾಂಶುಪಾಲರು : ಸದಸ್ಯರು
7. ಶ್ರೀ ತಿಪ್ಪೇಶ್ ಜಿ.ಆರ್, ಪ್ರಾಂಶುಪಾಲರು : ಸದಸ್ಯರು
8. ಶ್ರೀಮತಿ ಉಷಾ ಎಸ್. ಆರ್, ಪ್ರಾಂಶುಪಾಲರು : ಸದಸ್ಯರು
9. ಡಾ. ಅಂಜನಪ್ಪ ಡಿ.ಕೆ., ಪ್ರಾಂಶುಪಾಲರು : ಸದಸ್ಯರು
10. ಡಾ. ರವಿ ಎಸ್. ಪಿ, ಪ್ರಾಂಶುಪಾಲರು : ಸದಸ್ಯರು
11. ಶ್ರೀ ಎಸ್. ಮುರಿಗೇಂದ್ರಪ್ಪ, ಪ್ರಾಂಶುಪಾಲರು : ಸದಸ್ಯರು
12. ಡಾ. ಎ. ಜೆ. ನೀತಾ, ಪ್ರಾಂಶುಪಾಲರು : ಸದಸ್ಯರು
13. ಡಾ. ರವಿಕುಮಾರ್ ಪಾಟೀಲ್ ಹೆಚ್.ಎಸ್, ಪ್ರಾಧ್ಯಾಪಕರು : ಸದಸ್ಯರು
14. ಡಾ. ಮಮತ ಜಿ. ಪಿ., ಪ್ರಾಧ್ಯಾಪಕರು : ಸದಸ್ಯರು
15. ಡಾ. ವಿರುಪಾಕ್ಷಯ್ಯ ಡಿ.ಬಿ.ಎಂ, ಪ್ರಾಧ್ಯಾಪಕರು : ಸದಸ್ಯರು
16. ಡಾ. ವೆಂಕಟರಾವ್ ಎಂ. ಪಲಾಟೆ, ಪ್ರಾಧ್ಯಾಪಕರು : ಸದಸ್ಯರು
17. ಡಾ. ಮುತ್ತನಗೌಡ ಎಂ ಕಳಸದ, ಪ್ರಾಧ್ಯಾಪಕರು : ಸದಸ್ಯರು
18. ಡಾ. ಸುಚಿತ್ರ ಎಸ್., ಡೀನರು, ಕಲಾ ನಿಕಾಯ : ಸದಸ್ಯರು
19. ಡಾ. ಮಹಾಬಲೇಶ್ವರ ಯು.ಎಸ್., ಡೀನರು, ವಿಜ್ಞಾನ ನಿಕಾಯ ಹಾಗೂ ನಿರ್ದೇಶಕರು ವಿದ್ಯಾರ್ಥಿ ಕಲ್ಯಾಣ ಘಟಕ : ಸದಸ್ಯರು
20. ಡಾ. ಶಶಿಧರ್ ಆರ್, ಡೀನರು, ವಾಣಿಜ್ಯ ನಿಕಾಯ : ಸದಸ್ಯರು
21. ಡಾ. ಪ್ರಕಾಶ ಡಿ.ಜಿ. ನಿರ್ದೇಶಕರು, ಪಿ.ಎಂ.ಇ. ಬೋರ್ಡ್ : ಸದಸ್ಯರು
22. ಡಾ. ರಂಗಪ್ಪ ಕೆ.ಬಿ., ನಿರ್ದೇಶಕರು, ಸಿ.ಡಿ.ಸಿ ವಿಭಾಗ, : ಸದಸ್ಯರು
23. ಶ್ರೀ ದ್ಯಾಮನಗೌಡ ಮುದ್ದನಗೌಡ್ರ, ಹಣಕಾಸು ಅಧಿಕಾರಿಗಳು : ಸದಸ್ಯರು
24. ಡಾ. ರಮೇಶ್ ಸಿ. ಕೆ., ಕುಲಸಚಿವರು, ಪರೀಕ್ಷಾಂಗ : ಸದಸ್ಯರು
25. ಡಾ. ಶಶಿಧರ್ ಆರ್, ಕುಲಸಚಿವರು, ಆಡಳಿತ (ಪ್ರಭಾರೆ) ಹಾಗೂ ಡೀನರು, ವಾಣಿಜ್ಯ ನಿಕಾಯ. : ಸದಸ್ಯ ಕಾರ್ಯದರ್ಶಿ

ಪ್ರಾರಂಭದಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ, ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು. ನಂತರ ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನಿಂದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನಾಮನಿರ್ದೇಶಗೊಂಡಿರುವ ಶ್ರೀ ಕೆ. ಅಬ್ದುಲ್ ಜಬ್ಬಾರ್, ದಾವಣಗೆರೆ – ಇವರನ್ನು ಅಭಿನಂದಿಸಿ, ಎಲ್ಲಾ ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು                ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
| --- | --- |
| ವಿಷಯ ಸಂಖ್ಯೆ: | ವಿ.ವಿ.ಪ.01(a)-(09/24) |

## -: ಟಿಪ್ಪಣಿ :-

**ವಿಷಯ: ದಿನಾಂಕ:09.07.2024 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*****

ದಿನಾಂಕ:09.07.2024 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ ದಿನಾಂಕ:19.07.2024ರಂದು ಕಳುಹಿಸಲಾಗಿತ್ತು. ಈ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:09.07.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭಾ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(b)–(09/24) |

**–: ಟಿಪ್ಪಣಿ :–**

**ವಿಷಯಃ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು**

*****

ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ Draft Statutes governing the Rules of Business of the Finance Committee of Davangere University for its convenient transactions – ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ ವಿಶ್ವವಿದ್ಯಾನಿಲಯದಲ್ಲಿ **ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸದರಿ ಪರಿನಿಯಮಗಳನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ Draft Statutes governing the Rules of Business of the Finance Committee of Davangere University for its convenient transactions – ಕರಡು ಪರಿನಿಯಮಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(c)-(09/24) |

## -: ಟಿಪ್ಪಣಿ :-

**ವಿಷಯಃ ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ (Board of Studies) ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು**

*****

ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ Draft Statutes governing the Rules of Business of the Board of Studies of Davangere University for its convenient transactions - ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ ವಿಶ್ವವಿದ್ಯಾನಿಲಯದಲ್ಲಿ **ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸದರಿ ಪರಿನಿಯಮಗಳನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ Draft Statutes governing the Rules of Business of the Board of Studies of Davangere University for its convenient transactions - ಕರಡು ಪರಿನಿಯಮಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(d)-(09/24) |

**-: ಟಿಪ್ಪಣಿ :-**

**ವಿಷಯ: ವಿಶ್ವವಿದ್ಯಾನಿಲಯದ ಶೈಕ್ಷಣಿಕ ನಿಕಾಯಗಳ(Various Academic Faculties) ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು**

*****

ವಿಶ್ವವಿದ್ಯಾನಿಲಯದ ಶೈಕ್ಷಣಿಕ ನಿಕಾಯಗಳ ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ Draft Statutes governing the Rules of Business of the Various Academic Faculties of Davangere University for its convenient transactions - ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ ವಿಶ್ವವಿದ್ಯಾನಿಲಯದಲ್ಲಿ **ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸದರಿ ಪರಿನಿಯಮಗಳನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ನಿಕಾಯಗಳ ಸಭಾ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ Draft Statutes governing the Rules of Business of the Various Academic Faculties of Davangere University for its convenient transactions - ಕರಡು ಪರಿನಿಯಮಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(e)-(09/24) |

## -: ಟಿಪ್ಪಣಿ :-

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪ್ರಾರಂಭಿಸುವ ಕುರಿತಾದ Regulations ನ್ನು ಅನುಮೋದಿಸುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪ್ರಾರಂಭಿಸುವ ಕುರಿತಾದ Regulationsಗಳನ್ನು ಸಿದ್ಧಪಡಿಸಲಾಗಿದ್ದು, ಸದರಿ Regulationsಗಳನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿ ಅನುಮೋದನೆ ಪಡೆಯಲು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪ್ರಾರಂಭಿಸುವ ಕುರಿತಾದ Regulationsಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(a)-(09/24) |

## -: ಟಿಪ್ಪಣಿ :-

**ವಿಷಯಃ ಸ್ನಾತಕೋತ್ತರ ಕಲಾ ನಿಕಾಯದ ಸಭಾ ನಡಾವಳಿಗಳ ದೃಡೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ **ಕಲಾ ನಿಕಾಯದ** ಎಲ್ಲಾ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ಕಲಾ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ಕಲಾ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(b)–(09/24) |

## –: ಟಿಪ್ಪಣಿ :–

**ವಿಷಯಃ ಸ್ನಾತಕೋತ್ತರ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭಾ ನಡಾವಳಿಗಳ ದೃಡೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ **ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ** ಎಲ್ಲಾ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(c)-(09/24) |

## -: ಟಿಪ್ಪಣಿ :-

**ವಿಷಯ: ಸ್ನಾತಕೋತ್ತರ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭಾ ನಡಾವಳಿಗಳ ದೃಡೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಎಲ್ಲಾ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(d)-(09/24) |

## -: ಟಿಪ್ಪಣಿ :-

**ವಿಷಯಃ ಸ್ನಾತಕೋತ್ತರ ಶಿಕ್ಷಣ ನಿಕಾಯದ ಸಭಾ ನಡಾವಳಿಗಳ ದೃಡೀಕರಣ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ **ಶಿಕ್ಷಣ ನಿಕಾಯದ** ಎಲ್ಲಾ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:25.09.2024 ರಂದು ಶಿಕ್ಷಣ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಎಲ್ಲಾ ಸ್ನಾತಕೋತ್ತರ ಪದವಿಯ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮ ಕುರಿತು ದಿನಾಂಕ:25.09.2024ರಂದು ಜರುಗಿದ ಶಿಕ್ಷಣ ನಿಕಾಯದ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ(BOS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(e)-(09/24) |

## -: ಟಿಪ್ಪಣಿ :-

**ವಿಷಯ:** **ರಾಜ್ಯ ಶಿಕ್ಷಣ ನೀತಿ (SEP) ಸ್ನಾತಕ ಪದವಿಯ 1 ಮತ್ತು 2ನೇ ಸೆಮಿಸ್ಟರ್‌ಗಳಿಗೆ ಕಡ್ಡಾಯ ವಿಷಯಗಳ ಬೋಧನೆ ಕುರಿತು.**

ಉಲ್ಲೇಖ: 1. ವಿವಿಧ ನಿಕಾಯಗಳ ಡೀನರುಗಳ ಸಭೆಯ ನಿರ್ಣಯ ದಿನಾಂಕ:07.08.2024.

2. ವಿಶ್ವವಿದ್ಯಾನಿಲಯದ ಸುತ್ತೋಲೆ ಪತ್ರ ಸಂಖ್ಯೆ/ದಾವಿವಿ/ಬಿಓಎಸ್/469/2024-25/1698 ದಿನಾಂಕ09.08.2024.

*********

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು - ಇವರ ನಿರ್ದೇಶಾನುಸಾರ ಪ್ರಸ್ತುತ 2024-25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿಯ ಸ್ನಾತಕ(UG) ಪದವಿಯ 1 ಮತ್ತು 2 ನೇ ಸೆಮಿಸ್ಟರ್‌ಗಳಿಗೆ ಕಡ್ಡಾಯ ವಿಷಯ (ಪತ್ರಿಕೆ)ಗಳನ್ನು (SEC) ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯಗಳಿಗೆ ಪರಿಚಲಿಸಿ ಬೋಧಿಸುವ ಕುರಿತು ದಿನಾಂಕ:07.08.2024 ರ ವಿಶ್ವವಿದ್ಯಾನಿಲಯದ ವಿವಿಧ ನಿಕಾಯಗಳ ಡೀನರುಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಉಲ್ಲೇಖ(2)ರಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು.

ಆದರೆ, ಸದರಿ ಕಡ್ಡಾಯ ಪತ್ರಿಕೆಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವಂತೆ ತಿದ್ದುಪಡಿ ಮಾಡಿದ್ದು, ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ದಿನಾಂಕ:22.09.2024 ರಂದು ಪರಿಷ್ಕೃತ ಸುತ್ತೋಲೆ ಹೊರಡಿಸಲಾಗಿದೆ. ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

| ಸೆಮಿಸ್ಟರ್‌ಗಳು | ಪತ್ರಿಕೆಗಳು | ಕೋರ್ಸ್‌ಗಳು |
|---|---|---|
| I | Indian Constitution | ಬಿ.ಕಾಂ./ಬಿ.ಬಿ.ಎ.<br>B.Com/BBA |
| | Environmental Studies | ಬಿ.ಎ/ಬಿ.ಎಸ್ಸಿ/ಬಿ.ಎಸ್.ಡಬ್ಲ್ಯೂ/ಬಿ.ವಿ.ಎ./ಬಿ.ಸಿ.ಎ<br>BA/B.Sc./BSW/BVA/BCA |
| II | Indian Constitution | ಬಿ.ಕಾಂ./ಬಿ.ಬಿ.ಎ.<br>B.Com/BBA |
| | Environmental Studies | ಬಿ.ಎ/ಬಿ.ಎಸ್ಸಿ/ಬಿ.ಎಸ್.ಡಬ್ಲ್ಯೂ/ಬಿ.ವಿ.ಎ./ಬಿ.ಸಿ.ಎ<br>BA/B.Sc./BSW/BVA/BCA |

| SI. No | Courses | Credits | IA Marks | SEE Marks | Teaching hours per week | Total Marks | Duration of exam |
|---|---|---|---|---|---|---|---|
| 1. | Environmental Studies | 2 | 10 | 40 | 3 | 50 | 2 hours |
| 2. | Indian Constitution. | 2 | 10 | 40 | 3 | 50 | 2 hours |

### :: ನಿರ್ಣಯ ::

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು - ಇವರ ನಿರ್ದೇಶಾನುಸಾರ 2024-25ನೇ ಶೈಕ್ಷಣಿಕ ಸಾಲಿನ ರಾಜ್ಯ ಶಿಕ್ಷಣ ನೀತಿ (SEP) ಯ ಸ್ನಾತಕ ಪದವಿಯ 1 ಮತ್ತು 2 ನೇ ಸೆಮಿಸ್ಟರ್‌ಗಳಿಗೆ ಕಡ್ಡಾಯ ವಿಷಯಗಳನ್ನು ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯಗಳಲ್ಲಿ ಪರಿಚಲಿಸಿ ಹಾಗೂ ಬೋಧಿಸುವ ಕುರಿತು ದಿನಾಂಕ:07.08.2024 ರ ವಿವಿಧ ನಿಕಾಯಗಳ ಡೀನರುಗಳ ಸಭೆಯಲ್ಲಿ ಈ ಮೇಲ್ಕಂಡ ಕೋಷ್ಟಕದಲ್ಲಿರುವಂತೆ ಬೋಧಿಸಲು ನಿರ್ಣಯಿಸಿರುವುದನ್ನು ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ(BOS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(f)-(09/24) |

## -: ಟಿಪ್ಪಣಿ :-

**ವಿಷಯಃ ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನದ ವಿಭಾಗದ ವಿದ್ಯಾರ್ಥಿಗಳಿಗೆ MA/ M.Sc. ಪದವಿ ಬದಲಿಗೆ M.Sc. ಪದವಿ ನೀಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆಯಲ್ಲಿ ಆಗಸ್ಟ್-2018 ರಿಂದ ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ **(Criminology and forensic Science) MA/ M.Sc.** ಪದವಿಯನ್ನು ಪ್ರಾರಂಭಿಸಲಾಗಿದೆ.

ಸದರಿ ವಿಭಾಗಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ 2018-19ನೇ ಶೈಕ್ಷಣಿಕ ಸಾಲಿನಿಂದ **MA/M.Sc.** ಎಂಬ ಶೀರ್ಷಿಕೆಯಡಿಯಲ್ಲಿ ಸೆಪ್ಟಂಬರ್/ಅಕ್ಟೋಬರ್-2023ರ ವರೆಗಿನ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸಲಾಗಿದೆ. ಆದರೆ, 2023-24 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಉದ್ಯೋಗ ಪಡೆಯುವ ಹಿತದೃಷ್ಟಿಯಿಂದ **MA/M.Sc.** ಶೀರ್ಷಿಕೆ ಬದಲಾಗಿ **M.Sc.** ಶೀರ್ಷಿಕೆಯಲ್ಲಿ ಅಂಕಪಟ್ಟಿಗಳನ್ನು ನೀಡುವಂತೆ ಕೋರಿರುವ ಹಿನ್ನೆಲೆಯಲ್ಲಿ ದಿನಾಂಕ:04.09.2024 ರಂದು ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ (Criminology and forensic Science) ಅಧ್ಯಯನ ಮಂಡಳಿ ಸಭೆಯನ್ನು ಏರ್ಪಡಿಸಿ, ಸಭೆಯಲ್ಲಿ **2024-25ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ MA/M.Sc. ಶೀರ್ಷಿಕೆ ಬದಲಾಗಿ M.Sc in Criminology and forensic Science ಶೀರ್ಷಿಕೆಯಲ್ಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ನೀಡುವಂತೆ ನಿರ್ಣಯಿಸಿ,** 01 ರಿಂದ 04ನೇ ಸೆಮಿಸ್ಟರ್‌ನ ಪಠ್ಯಕ್ರಮ ಹಾಗೂ ನಿಯಮಾವಳಿ (Regulations) ಸಿದ್ಧಪಡಿಸಿ ಸಲ್ಲಿಸಿರುತ್ತಾರೆ.

ಮುಂದುವರೆದು, 2024-25ನೇ ಶೈಕ್ಷಣಿಕ ಸಾಲಿನಿಂದ M.Sc. in Criminology and forensic Science ಎಂಬ ಶೀರ್ಷಿಕೆ ನೀಡುವುದರಿಂದ, ಸದರಿ ವಿಷಯವು ಕಲಾ ನಿಕಾಯದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಕ್ಕೆ ಬದಲಾವಣೆಯಾಗಿರುತ್ತದೆ. ಆದ್ದರಿಂದ, ಸದರಿ ವಿಷಯನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಪದವಿಯನ್ನು 2024-25ನೇ ಶೈಕ್ಷಣಿಕ ಸಾಲಿನಿಂದ ಸದರಿ ವಿಷಯವು ಕಲಾ ನಿಕಾಯದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಕ್ಕೆ ಬದಲಾವಣೆಯಾಗಿರುವ ಕುರಿತು ಪರಿಶೀಲಿಸಲಾಯಿತು ಮತ್ತು 2024-25ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ M.Sc. (Master of Science) ಎಂಬ ಶೀರ್ಷಿಕೆಯಲ್ಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ನೀಡಲು ಸಭೆ ನಿರ್ಣಯಿಸಿತು.

ಮುಂದುವರೆದು, 2023-24ನೇ ಸಾಲಿನ 4ನೇ ಸೆಮಿಸ್ಟರ್‌ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸ್ನಾತಕ ಪದವಿಯಲ್ಲಿ ಬಿ.ಎ. ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಎಂ.ಎ ಎಂದು ಹಾಗೂ ಬಿ.ಎಸ್ಸಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಎಂ.ಎಸ್ಸಿ. ಎಂಬ ಶೀರ್ಷಿಕೆಯಡಿಯಲ್ಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(g)-(09/24) |

## -:ಟಿಪ್ಪಣಿ:-

**ವಿಷಯ: ರಾಜ್ಯ ಶಿಕ್ಷಣ ನೀತಿಯ ಸ್ನಾತಕ ಪದವಿಯ 1 ರಿಂದ 4 ನೇ ಸೆಮಿಸ್ಟರ್‌ನ ಪ್ರಮುಖ ಪತ್ರಿಕೆಗಳ ಬೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸುವ ಕುರಿತು.**

*******

2024-25ನೇ ಶೈಕ್ಷಣಿಕ ಸಾಲಿನ ರಾಜ್ಯ ಶಿಕ್ಷಣ ನೀತಿಯ ಮಾರ್ಗಸೂಚಿಗಳನುಸಾರ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಸ್ನಾತಕ ಪದವಿಯ ಪಠ್ಯಕ್ರಮಗಳ ಕುರಿತು ಅಧ್ಯಯನ ಮಂಡಳಿಗಳಲ್ಲಿ ಚರ್ಚಿಸಿ 1 & 2ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಸಿದ್ದಪಡಿಸಿ ಅಧ್ಯಯನ ಮಂಡಳಿಯಲ್ಲಿ ಅನುಮೋದಿಸಿರುತ್ತಾರೆ. ದಿನಾಂಕ21.06.2024 ರ ಕಲಾ ನಿಕಾಯದಲ್ಲಿ ಸದರಿ ಪಠ್ಯಕ್ರಮಗಳನ್ನು ಅನುಮೋದಿಸಲಾಗಿದೆ. ಮುಂದುವರಿಂದು, ದಿನಾಂಕ:09.07.2024ರ ವಿದ್ಯಾವಿಷಯಕ ಪರಿಷತ್ತ ಸಭೆಯಲ್ಲಿ ಪಠ್ಯಕ್ರಮ ಹಾಗೂ ನಡಾವಳಿಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಸ್ನಾತಕ ಪದವಿಯ ರಾಜ್ಯ ಶಿಕ್ಷಣ ನೀತಿಯ ಮಾರ್ಗಸೂಚಿಗಳನುಸಾರ ಕಲಾ ನಿಕಾಯದ ಪಠ್ಯಕ್ರಮಾಗಳನ್ನು ರಚಿಸಲಾಗಿದೆ. ಆದರೆ, ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ವಿವಿಧ ವಿಭಾಗ ಅಧ್ಯಾಪಕರ ಸಂಘದ ಪ್ರತಿನಿಧಿಗಳು ಭೋಧನಾ ಅವಧಿಯನ್ನು ಹೆಚ್ಚಿಸುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯನ್ನು ಪರಿಶೀಲಿಸಲಾಗಿ ಅನ್ಯ ವಿಶ್ವವಿದ್ಯಾನಿಲಯಗಳಲ್ಲಿ ಭೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸಿರುವ ಹಿನ್ನಲೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ರಾಜ್ಯ ಶಿಕ್ಷಣ ನೀತಿಯ ಸ್ನಾತಕ ಪದವಿಯ ಸಹ 1 ರಿಂದ 4 ನೇ ಸಮಿಸ್ಟರ್‌ನ ಪ್ರಮುಖ ಪತ್ರಿಕೆಗಳ ಭೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸುವ ಕುರಿತು ದಿನಾಂಕ:27.09.2024 ರಂದು ಏರ್ಪಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಎಲ್ಲಾ ಸ್ನಾತಕ ಪದವಿಯ 1 ರಿಂದ 4 ಸೆಮಿಸ್ಟರ್‌ನ ಪ್ರಮುಖ ಪತ್ರಿಕೆಗಳ ಬೋಧನಾ ಅವಧಿಯನ್ನು 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸಿ ಬೋಧಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಸಂಶೋಧನಾ ಹಾಗೂ ಅಭಿವೃದ್ಧಿ ಕೋಶ (ಪಿ.ಹೆಚ್.ಡಿ.) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.03(a)–(09/24) |

## –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡಿರುವ ಕುರಿತು.**

*********

ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಸಂಶೋಧನೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಡಾಕ್ಟರೇಟ್ (ಪಿಹೆಚ್.ಡಿ) ಪದವಿ ಪಡೆದಿರುವ ವಿಶ್ವವಿದ್ಯಾನಿಲಯದ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ. ನಿಯಮಾನುಸಾರ ಸಂಶೋಧನಾ ಮಾರ್ಗದರ್ಶರಾಗಿ ಮಾನ್ಯತೆ ನೀಡಿರುವ ವಿಷಯವನ್ನು **ದಿನಾಂಕ:13.08.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**:Number of Teachers Recognised as Guides:**

| ಕ್ರ.ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 1 | ಡಾ. ಪ್ರದೀಪ್ ಬಿ.ಎಸ್ | ಸಹಾಯಕ ಪ್ರಾಧ್ಯಾಪಕರು | ಸಮಾಜಕಾರ್ಯ ಅಧ್ಯಯನ ವಿಭಾಗ |
| 2 | ಡಾ. ವಿನಯ್ ಎಸ್., | ಸಹಾಯಕ ಪ್ರಾಧ್ಯಾಪಕರು | ಗಣಕವಿಜ್ಞಾನ ಅಧ್ಯಯನ ವಿಭಾಗ |
| 3 | ಡಾ. ಚಂದ್ರಲೇಖ ಜೆ.ಎಸ್., | ಸಹಾಯಕ ಪ್ರಾಧ್ಯಾಪಕರು | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ |

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿ ಸಂಶೋಧನೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಡಾಕ್ಟರೇಟ್ (ಪಿ.ಹೆಚ್.ಡಿ) ಪದವಿ ಪಡೆದಿರುವ ವಿಶ್ವವಿದ್ಯಾನಿಲಯದ ಈ ಮೇಲ್ಕಂಡ ಮೂವರು ಸಹಾಯಕ ಪ್ರಾಧ್ಯಾಪಕರುಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(a)-(09/24) |

## -: ಟಿಪ್ಪಣಿ :-

ವಿಷಯ: **2024-25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಹಾಗೂ ವಸತಿ ನಿಲಯಗಳ ಶುಲ್ಕ ಪರಿಷ್ಕರಣೆಯ ಕುರಿತು.**

ಉಲ್ಲೇಖ: ವಿವಿಧ ನಿಕಾಯಗಳ ಡೀನರ ಸಭೆಯ ನಡಾವಳಿ ದಿ:14.08.2024

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದತೆ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:14.08.2024ರಂದು ನಡೆದ ಡೀನರ ಸಭೆಯಲ್ಲಿ 2024-25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿ ಹಾಗೂ ವಸತಿ ನಿಲಯಗಳ ಶುಲ್ಕಗಳನ್ನು ಶೇ.10 ರಷ್ಟು ಹೆಚ್ಚಿಸಿ ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ ಸರಿದೂಗಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು, ಈ ಕುರಿತು ಚರ್ಚಿಸಲು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಹಾಗೂ ವಸತಿ ನಿಲಯಗಳ ಶುಲ್ಕಗಳನ್ನು 2024-25ನೇ ಸಾಲಿಗೆ **ಶೇ.10% ರಷ್ಟು ಹೆಚ್ಚಿಸಿ** ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ ಸರಿದೂಗಿಸಿರುವ ಕುರಿತು ಚರ್ಚಿಸಿ ಅನುಮೋದಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(b)-(09/24) |

## -: ಟಿಪ್ಪಣಿ :-

ವಿಷಯ: **2024-25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಕುರಿತು.**

ಉಲ್ಲೇಖ: ವಿವಿಧ ನಿಕಾಯಗಳ ಡೀನರ ಸಭೆಯ ನಡಾವಳಿ ದಿ:14.08.2024

*********

ಸರ್ಕಾರದ ನಿರ್ದೇಶನದಂತೆ, ವಾರ್ಷಿಕ ವರಮಾನ ಕಡಿಮೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (SC/ST) ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕ ಪಾವತಿಯಿಂದ ವಿನಾಯ್ತಿ ನೀಡಲಾಗಿರುತ್ತದೆ. ಆದ್ದರಿಂದ, ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳು ಅಂತಹ (SC/ST) ವಿದ್ಯಾರ್ಥಿಗಳಿಂದ ಪ್ರವೇಶಾತಿ ಸಂದರ್ಭದಲ್ಲಿ ಯಾವುದೇ ಶುಲ್ಕವನ್ನು ತೆಗೆದುಕೊಳ್ಳುವಂತಿಲ್ಲ ವಿದ್ಯಾರ್ಥಿಗಳಿಗೆ **"ವಿದ್ಯಾರ್ಥಿ ವೇತನ ಮಂಜೂರಾಗಿ ಏಳು ದಿನಗಳೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕವನ್ನು ಜಮಾ ಮಾಡಬೇಕು"** ಎಂಬ ಮುಚ್ಚಳಿಕೆ ಪತ್ರವನ್ನು ಪಡೆದು ಸಂಬಂಧಪಟ್ಟ ವಿಭಾಗದಲ್ಲಿ ಇಟ್ಟುಕೊಳ್ಳಬೇಕು. ಒಂದು ವೇಳೆ ನಿಗದಿತ ದಿನದೊಳಗೆ ಪ್ರವೇಶಾತಿ ಶುಲ್ಕ ಪಾವತಿಸದಿದ್ದಲ್ಲಿ **"ದಂಡ ಶುಲ್ಕ ರೂ.1000/-ಗಳನ್ನು ವಿಧಿಸಲು"** ಡೀನರ ಸಭೆಯಲ್ಲಿ ನಿರ್ಣಯಿಸಲಾಯಿತು. ಈ ಕುರಿತು ಚರ್ಚಿಸಲು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಸರ್ಕಾರದ ನಿರ್ದೇಶನದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (SC/ST) ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕ ಪಾವತಿಯಿಂದ ವಿನಾಯ್ತಿ ನೀಡಿರುವುದರಿಂದ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳು SC/ST ವಿದ್ಯಾರ್ಥಿಗಳಿಂದ ಪ್ರವೇಶಾತಿ ಸಂದರ್ಭದಲ್ಲಿ ಯಾವುದೇ ಶುಲ್ಕವನ್ನು ತೆಗೆದುಕೊಳ್ಳುವಂತಿಲ್ಲ ವಿದ್ಯಾರ್ಥಿಗಳಿಗೆ **"ವಿದ್ಯಾರ್ಥಿ ವೇತನ ಮಂಜೂರಾಗಿ ಏಳು ದಿನಗಳೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕವನ್ನು ಜಮಾ ಮಾಡಬೇಕು"** ಎಂಬ ಮುಚ್ಚಳಿಕೆ ಪತ್ರವನ್ನು ಹಾಗೂ ನಿಗದಿತ ದಿನದೊಳಗೆ ಪ್ರವೇಶಾತಿ ಶುಲ್ಕ ಪಾವತಿಸದಿದ್ದಲ್ಲಿ **"ದಂಡ ಶುಲ್ಕ ರೂ.1000/-ಗಳನ್ನು ವಿಧಿಸುವ"** ಕುರಿತು ಡೀನರುಗಳ ಸಭೆಯಲ್ಲಿ ನಿರ್ಣಯಿಸಿರುವ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(c)-(09/24) |

# -:ಟಿಪ್ಪಣಿ:-

**ವಿಷಯ: ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು - ಇಲ್ಲಿನ ವಿದ್ಯಾರ್ಥಿಗಳನ್ನು ವರ್ಗಾವಣೆ ಮಾಡುವ ಕುರಿತು.**

*******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ **ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು** ಇವರು 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯ ಶುಲ್ಕ ಪಾವತಿ ಮಾಡಿರುವುದಿಲ್ಲ ಹಾಗೂ ಕಾರಣಾಂತರಗಳಿಂದ ಕಾಲೇಜನ್ನು ಸ್ಥಗಿತಗೊಳಿಸುತ್ತಿರುವುದಾಗಿ ದಿನಾಂಕ:02.09.2024ರ ಪತ್ರದ ಮೂಲಕ ತಿಳಿಸಿರುತ್ತಾರೆ. ಆದರೆ, ಯಾವುದೇ ಕಾಲೇಜಿಗೆ ವಿಶ್ವವಿದ್ಯಾನಿಲಯವು ಮುಂದುವರಿಕೆ ಸಂಯೋಜನೆ ನೀಡುವಾಗ ಆಯಾ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಪೂರ್ಣಗೊಳಿಸಲು ಅವಕಾಶ ಕಲ್ಪಿಸುವಂತೆ ಆದೇಶ ನೀಡಲಾಗಿದ್ದರೂ, 03ನೇ ವರ್ಷದ ವಿದ್ಯಾರ್ಥಿಗಳನ್ನು **ಶ್ರೀ ರಾಜರಾಜೇಶ್ವರಿ ಪ್ರಥಮ ದರ್ಜೆ ಕಾಲೇಜು, ಜಗಳೂರು- ಇಲ್ಲಿಗೆ ವರ್ಗಾಯಿಸುವಂತೆ ಕೋರಿರುತ್ತಾರೆ**. ಈ ಬಗ್ಗೆ ಪರಿಶೀಲಿಸಿ ಶ್ರೀರಾಜರಾಜೇಶ್ವರಿ ಕಾಲೇಜು, ಜಗಳೂರು- ಇಲ್ಲಿಗೆ ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಕಾಲೇಜು ಬದಲಾವಣೆ ಶುಲ್ಕ ಪಡೆದು ಹಾಗೂ ಪ್ರವೇಶಮಿತಿಯೊಳಗೆ ವಿದ್ಯಾರ್ಥಿಗಳಿಗೆ ದಾಖಲಾಗಲು ಅವಕಾಶ ಕಲ್ಪಿಸುವ ಬಗ್ಗೆ ಚರ್ಚಿಸಲು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು ಇವರು 2024-25ನೇ ಶೈಕ್ಷಣಿಕ ಸಾಲಿನಿಂದ ತಮ್ಮ ಕಾಲೇಜನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿ ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿರುವುದರಿಂದ - ಸದರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ 03 ನೇ ವರ್ಷದ ವಿದ್ಯಾರ್ಥಿಗಳು ವ್ಯಾಸಂಗ ಪೂರ್ಣಗೊಳಿಸಲು ಅನುಕೂಲವಾಗುವಂತೆ ಸದರಿ ವಿದ್ಯಾರ್ಥಿಗಳನ್ನು ಶ್ರೀ ರಾಜರಾಜೇಶ್ವರಿ ಪ್ರಥಮ ದರ್ಜೆ ಕಾಲೇಜು, ಜಗಳೂರು - ಇಲ್ಲಿಗೆ ವರ್ಗಾಯಿಸಲು ಹಾಗೂ ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಕಾಲೇಜು ಬದಲಾವಣೆ ಶುಲ್ಕ ಪಡೆದು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಅಧ್ಯಯನ ಮಂಡಳಿ(BoS) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(h)-(09/24) |

## -:ಟಿಪ್ಪಣಿ:-

ವಿಷಯ: **2024-25ನೇ ಸಾಲಿನಿಂದ ಸ್ನಾತಕೋತ್ತರ ಪದವಿಗಳಲ್ಲಿ ಕಡ್ಡಾಯ ವಿಷಯಗಳನ್ನು ಬೋಧಿಸುವ ಹಾಗೂ ಪರೀಕ್ಷೆ ನಡೆಸುವ ಕುರಿತು.**

*******

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಪದವಿಯ ಕೋರ್ಸ್‌ಗಳ 2016-17ರ ನಿಯಮಾವಳಿಯಂತೆ ಸಿ.ಬಿ.ಸಿ.ಎಸ್. ಪಠ್ಯಕ್ರಮಗಳಲ್ಲಿ ಆಯಾ ವಿಭಾಗದ ಎಲ್ಲಾ ವಿಷಯಗಳನ್ನು ವಿದ್ಯಾರ್ಥಿಗಳು ವ್ಯಾಸಂಗ ಮಾಡಬೇಕಿರುತ್ತದೆ.

ಸದರಿ ಪಠ್ಯಕ್ರಮಗಳಲ್ಲಿ ಈ ಕೆಳಕಂಡ ಕಡ್ಡಾಯ ವಿಷಯಗಳನ್ನು ಬೋಧನೆ ಮಾಡಬೇಕಿರುತ್ತದೆ. ಅದರಲ್ಲಿ Additional Credits ಪ್ರತಿ ಸೆಮಿಸ್ಟರ್‌ಗೆ 02 ಕ್ರೆಡಿಟ್‌ನಂತೆ ನಮೂದಿಸಬೇಕಿರುತ್ತದೆ.

ಆದರೆ, ಸದರಿ ಕ್ರೆಡಿಟ್ ಅಂಕಗಳನ್ನು ಉಳಿದ ವಿಷಯಗಳ ಒಟ್ಟಾರೆ ಅಂಕಗಳ ಜೊತೆ ಹಾಗೂ SGPA ಜೊತೆ ಸೇರ್ಪಡಿಸುವಂತಿಲ್ಲ.

| Sl.no | Semester | Paper Name | Credits |
|---|---|---|---|
| 1 | I Semester | English Language and Communication Skill | 2 |
| 2 | II Semester | Computer Skill | 2 |
| 3 | IV Semester | Personality Development | 2 |

ಮುಂದುವರೆದು, 2024-25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪದವಿಗಳಲ್ಲಿ ಕಡ್ಡಾಯ ವಿಷಯಗಳನ್ನು ಬೋಧಿಸುವ ಹಾಗೂ ಪರೀಕ್ಷೆ ನಡೆಸುವ ಕುರಿತು ಚರ್ಚಿಸಲು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪದವಿಗಳಲ್ಲಿ ಈ ಮೇಲ್ಕಂಡ ಕಡ್ಡಾಯ ವಿಷಯಗಳಿಗೆ ಸಂಬಂಧಿಸಿದಂತೆ 1ನೇ ಸೆಮಿಸ್ಟರ್‌ನಲ್ಲಿ English Language and Communication Skill ಬದಲಾಗಿ English Language and Soft Skill ವಿಷಯವನ್ನು ಬೋಧಿಸುವಂತೆ ಹಾಗೂ ಈ ಮೇಲ್ಕಂಡ ಪಟ್ಟಿಯಲ್ಲಿನ 03 ವಿಷಯಗಳನ್ನೊಳಗೊಂಡಂತೆ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನದ ಕುರಿತು 1 ಸಂಯುಕ್ತ ಅಧ್ಯಯನ ಮಂಡಳಿಯನ್ನು ರಚಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.05(a)–(09/24) |

**–: ಟಿಪ್ಪಣಿ :–**

**ವಿಷಯ: ವಿಶ್ವವಿದ್ಯಾನಿಲಯದ 2020–21 ಮತ್ತು 2021–22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಸರಣಾ ವರದಿಯ ಅನುಮೋದನೆ ಕುರಿತು.**

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 47(4) ರನ್ವಯ ವಿಶ್ವವಿದ್ಯಾನಿಲಯದ **2020–21 ಮತ್ತು 2021–22ನೇ ಆರ್ಥಿಕ ವರ್ಷದ ಲೆಕ್ಕ ಪರಿಶೋಧನಾ ಅನುಸರಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.** ಈ ಸಂಬಂಧವಾಗಿ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 47(4) ರನ್ವಯ ವಿಶ್ವವಿದ್ಯಾನಿಲಯದ 2020–21 ಮತ್ತು 2021–22ನೇ ಆರ್ಥಿಕ ವರ್ಷದ ಲೆಕ್ಕ ಪರಿಶೋಧನಾ ಅನುಸರಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
| --- | --- |
| ವಿಷಯ ಸಂಖ್ಯೆ: | ವಿ.ವಿ.ಪ.05(b)-(09/24) |

# -: ಟಿಪ್ಪಣಿ :-

ವಿಷಯ: **2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ Balance Sheet ನ್ನು ಅನುಮೋದಿಸುವ ಕುರಿತು.**

ಉಲ್ಲೇಖ:
1. ಹಣಕಾಸು ಸಮಿತಿ ಸಭೆಯ ಅನುಮೋದನೆ ದಿನಾಂಕ:29.07.2024
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14.08.2024

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 48 ರನ್ವಯ ವಿಶ್ವವಿದ್ಯಾನಿಲಯದ **2023-24ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.** ಈ ಸಂಬಂಧವಾಗಿ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ (48) ರನ್ವಯ ವಿಶ್ವವಿದ್ಯಾನಿಲಯದ 2023-24ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ.(IQAC) ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.06(a)-(09/24) |

## -:ಟಿಪ್ಪಣಿ:-

**ವಿಷಯ: 2023-24ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಅನುಮೋದಿಸುವ ಕುರಿತು.**

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಸರ್ಕಾರಕ್ಕೆ ಸಲ್ಲಿಸಲು ಕರಡು ವರದಿಯನ್ನು ಸಿದ್ಧಪಡಿಸಲಾಗಿದ್ದು, ಸದರಿ ವರದಿಯನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ವರದಿಯ ಕರಡು ಪ್ರತಿಯನ್ನು (Annual Report) ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ.(IQAC) ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.06(b)–(09/24) |

## –:ಟಿಪ್ಪಣಿ:–

**ವಿಷಯ: 2022–23ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕಪರಿಶೋಧನಾ ವರದಿ (AAA Report) ಅನುಮೋದನೆ ಕುರಿತು.**

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2022–23ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕಪರಿಶೋಧನಾ ವರದಿ (AAA Report) ಕರಡು ವರದಿಯನ್ನು ಸಿದ್ಧಪಡಿಸಲಾಗಿದ್ದು, ಸದರಿ ವರದಿಯನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕಪರಿಶೋಧನಾ ವರದಿಯ ಕರಡು ಪ್ರತಿಯನ್ನು (AAA Report) ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.07(a)–(09/24) |

## –:ಟಿಪ್ಪಣಿ:–

**ವಿಷಯ:** **ಶ್ರೀ ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ – ಎಂಬ ಕಾಲೇಜು 2024–25ನೇ ಶೈಕ್ಷಣಿಕ ಅವಧಿಯಿಂದ 'ಸಿಂಹಾದ್ರಿ ರೂರಲ್ ಡೆವಲಪ್‌ಮೆಂಟ್ & ಎಜುಕೇಷನ್ ಸೋಸೈಟಿ (ರಿ) ಚಿತ್ರದುರ್ಗ' ಎಂಬ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಕುರಿತು.**

ಉಲ್ಲೇಖ: 1. ಪ್ರಾಂಶುಪಾಲರು, ಶ್ರೀ ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ – ಇವರ ಪತ್ರ ಸಂ:SRCE/B.Ed/Samsthe-changed/319/2024-25 ದಿನಾಂಕ:27.05.2024
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08.07.2024

*******

ವಿಶ್ವವಿದ್ಯಾನಿಲಯದ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಸ್ನಾತಕ ಬಿ.ಇಡಿ. ಪದವಿ ಕಾಲೇಜಾದ ಶ್ರೀ ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ – ಎಂಬ ಕಾಲೇಜು ಈವರೆಗೂ ಸೀಡ್(ರಿ) ಸಂಸ್ಥೆಯಡಿಯಲ್ಲಿ ನಡೆಯುತ್ತಿದ್ದು, ಪ್ರಸ್ತುತ 2024–25ನೇ ಶೈಕ್ಷಣಿಕ ಅವಧಿಯಿಂದ 'ಸಿಂಹಾದ್ರಿ ರೂರಲ್ ಡೆವಲಪ್‌ಮೆಂಟ್ & ಎಜುಕೇಷನ್ ಸೋಸೈಟಿ (ರಿ) ಚಿತ್ರದುರ್ಗ' – ಎಂಬ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುವುದಾಗಿ ಸದರಿ ಸಂಸ್ಥೆಯ ಬದಲಾವಣೆಗೆ ಸಂಬಂಧಿಸಿದಂತೆ ಶುಲ್ಕ ಪಾವತಿ ಮಾಡಿರುತ್ತಾರೆ.

ಆದುದ್ದರಿಂದ, 2024–25ನೇ ಶೈಕ್ಷಣಿಕ ಸಾಲಿನಿಂದ ಸದರಿ ಕಾಲೇಜಿನ ಕೋರಿಕೆಯನುಸಾರ – 'ಸಿಂಹಾದ್ರಿ ರೂರಲ್ ಡೆವಲಪ್‌ಮೆಂಟ್ & ಎಜುಕೇಷನ್ ಸೋಸೈಟಿ (ರಿ) ಚಿತ್ರದುರ್ಗ' – ಎಂಬ ಸಂಸ್ಥೆಗೆ ಬದಲಾವಣೆ ಕುರಿತು ದಿನಾಂಕ:18.07.2024ರಂದು ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ವರದಿ ನೀಡಿದ್ದು, ಸಂಸ್ಥೆ ಬದಲಾವಣೆಗೆ ಸೂಕ್ತ ಕ್ರಮವಹಿಸಲಾಗಿದೆ.

**ಸದರಿ ವಿಷಯವನ್ನು ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸೂಚಿತ ವಿಷಯವನ್ನು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಸ್ನಾತಕ ಬಿ.ಇಡಿ. ಪದವಿ ಕಾಲೇಜಾದ ಶ್ರೀ ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ – ಎಂಬ ಕಾಲೇಜು ಪ್ರಸ್ತುತ 2024–25ನೇ ಶೈಕ್ಷಣಿಕ ಅವಧಿಯಿಂದ ಸೀಡ್(ರಿ.) ಸಂಸ್ಥೆಯ ಬದಲಾಗಿ **'ಸಿಂಹಾದ್ರಿ ರೂರಲ್ ಡೆವಲಪ್‌ಮೆಂಟ್ & ಎಜುಕೇಷನ್ ಸೋಸೈಟಿ (ರಿ.) ಚಿತ್ರದುರ್ಗ'** – ಎಂಬ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸಲು ವಿಶ್ವವಿದ್ಯಾನಿಲಯವು ನಿಯಮಾನುಸಾರ ಸೂಕ್ತ ಕ್ರಮಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.07(b)-(09/24) |

## –:ಟಿಪ್ಪಣಿ:–

ವಿಷಯ: **ಹೋ.ಚಿ.ಬೋರಯ್ಯ ಸ್ಮಾರಕ ಪ.ಜಾ/ಪ.ಪಂ. ಪ್ರಥಮ ದರ್ಜೆ ಕಾಲೇಜು, ಜಗಳೂರು – ಇವರಿಗೆ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ಕೈಗೊಂಡಿರುವ ಕುರಿತು.**

ಉಲ್ಲೇಖ:
1. ಪ್ರಾಂಶುಪಾಲರು, ಹೋ.ಚಿ.ಬೋರಯ್ಯ ಸ್ಮಾರಕ ಪ.ಜಾ/ಪ.ಪಂ. ಪ್ರಥಮ ದರ್ಜೆ ಕಾಲೇಜು, ಜಗಳೂರು – ಇವರ ಪತ್ರ ಸಂ: ಹೆಚ್‌ಬಿಸಿ/09/2024–25 ದಿನಾಂಕ:12.07.2024
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:16.07.2024

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಹೋ.ಚಿ.ಬೋರಯ್ಯ ಸ್ಮಾರಕ ಪ.ಜಾ/ಪ.ಪಂ. ಪ್ರಥಮ ದರ್ಜೆ ಕಾಲೇಜು, ಜಗಳೂರು – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ವಿಶ್ವವಿದ್ಯಾನಿಲಯದ ನಿಗದಿತ ದಿನಾಂಕದೊಳಗೆ ಸಂಯೋಜನಾ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಳಂಬದ ಕುರಿತು ಪರಿಶೀಲಿಸಿದ ತರುವಾಯ ಉಲ್ಲೇಖಿತ(2)ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದ್ದು, ದಿನಾಂಕ:18.07.2024ರಂದು ಸದರಿ ಕಾಲೇಜಿಗೆ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ನೀಡಿರುತ್ತದೆ. ತತ್ಸಂಬಂಧ, ಸದರಿ ಕಾಲೇಜಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

**ಸದರಿ ವಿಷಯವನ್ನು ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸೂಚಿತ ವಿಷಯವನ್ನು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಹೋ.ಚಿ.ಬೋರಯ್ಯ ಸ್ಮಾರಕ ಪ.ಜಾ/ಪ.ಪಂ. ಪ್ರಥಮ ದರ್ಜೆ ಕಾಲೇಜು, ಜಗಳೂರು – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿದ್ದರಿಂದ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು, ದಿನಾಂಕ:18.07.2024ರಂದು ಸದರಿ ಕಾಲೇಜಿಗೆ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ 2024–25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.07(c)–(09/24) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು – ಇಲ್ಲಿನ 2024–25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ–2024ರ ಪ್ರಕಾರ ವಿವಿಧ ಸ್ನಾತಕ ಪದವಿ ಪ್ರವೇಶಾತಿಗೆ ಅನುಮೋದನೆ ನೀಡುವ ಕುರಿತು.**

ಉಲ್ಲೇಖ:
1. ಸಂಯೋಜನಾಧಿಕಾರಿಗಳು, ದಾ.ವಿ.ಘ.ಕಾ. ತುರುವನೂರು – ಇವರ ಪತ್ರ ಸಂ:ದಾವಿವಿ/ಘಕಾ/2024–25 ದಿನಾಂಕ:23.07.2024.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:02.08.2024.

*******

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು, ಇಲ್ಲಿನ ಸಂಯೋಜನಾಧಿಕಾರಿಗಳು ಉಲ್ಲೇಖಿತ(1) ಪತ್ರದಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ ನೂತನ ರಾಜ್ಯ ಶಿಕ್ಷಣ ನೀತಿ–2024 (SEP)ರನುಸಾರ ಈ ಕೆಳಕಂಡ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವಂತೆ ಅನುಮೋದನೆ ಕೋರಿರುತ್ತಾರೆ. ಸದರಿ ವಿಷಯನ್ನು ಪರಿಶೀಲಿಸಲಾಗಿದ್ದು, ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ 2024–25ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಪದವಿ/ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಪದವಿ | ವಿಷಯ/ಸಮೂಹ | ಪ್ರವೇಶ ಮಿತಿ |
|---|---|---|---|
| 1 | ಬಿ.ಎ. | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ – HEP | 60 |
| | | ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ – HPS | 60 |
| 2 | ಬಿ.ಎಸ್ಸಿ. | ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ – CBZ | 30 |
| | | ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, – PCM | 30 |
| | | ಭೌತಶಾಸ್ತ್ರ, ಗಣಿತಶಾಸ್ತ್ರ, ಕಂಪ್ಯೂಟರ್ ಸೈನ್ಸ್ – PMCs | 30 |
| 3 | ಬಿ.ಕಾಂ. | ಕಡ್ಡಾಯ ವಿಷಯಗಳು | 60 |

**ಸದರಿ ವಿಷಯವನ್ನು ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸೂಚಿತ ವಿಷಯವನ್ನು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ತುರುವನೂರಿಗೆ ಸಂಬಂಧಿಸಿದಂತೆ 2024–25ನೇ ಸಾಲಿನಲ್ಲಿ ಈ ಮೇಲ್ಕಂಡ ಪದವಿ ಕೋರ್ಸುಗಳಿಗೆ ಅನುಮೋದನೆ ನೀಡಲಾಗಿರುವ ವಿಷಯವನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.07(d)–(0[illegible]/24) |

## –:ಟಿಪ್ಪಣಿ:–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ಹರಿಯಬ್ಬೆ – ಇಲ್ಲಿನ 2024–25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ–2024ರ ಪ್ರಕಾರ ವಿವಿಧ ಸ್ನಾತಕ ಪದವಿ ಪ್ರವೇಶಾತಿಗೆ ಅನುಮೋದನೆ ನೀಡುವ ಕುರಿತು.**

ಉಲ್ಲೇಖ:
1. ಸಂಯೋಜನಾಧಿಕಾರಿಗಳು, ದಾ.ವಿ.ಘ.ಕಾ. ಹರಿಯಬ್ಬೆ – ಇವರ ಪತ್ರ ಸಂ:ದಾವಿವಿ/ಘಕಾಹ/2022–23/61 ದಿನಾಂಕ:18.07.2024
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:02.08.2024

*******

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ಹರಿಯಬ್ಬೆ, ಇಲ್ಲಿನ ಸಂಯೋಜನಾಧಿಕಾರಿಗಳು ಉಲ್ಲೇಖಿತ(1) ಪತ್ರದಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ ನೂತನ ರಾಜ್ಯ ಶಿಕ್ಷಣ ನೀತಿ–2024 (SEP) ರನುಸಾರ ಈ ಕೆಳಕಂಡ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವಂತೆ ಅನುಮೋದನೆ ಕೋರಿರುತ್ತಾರೆ. ಸದರಿ ವಿಷಯನ್ನು ಪರಿಶೀಲಿಸಲಾಗಿದ್ದು, ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ 2024–25ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಪದವಿ/ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಪದವಿ | ವಿಷಯ/ಸಮೂಹ | ಪ್ರವೇಶ ಮಿತಿ |
|---|---|---|---|
| 1 | ಬಿ.ಎ. | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ – HEP | 40 |
| | | ಸಮಾಜಶಾಸ್ತ್ರ, ಕನ್ನಡ, ಇತಿಹಾಸ – SKH | 40 |
| | | ಇತಿಹಾಸ, ಇಂಗ್ಲೀಷ್, ಸಮಾಜಶಾಸ್ತ್ರ – HES | 40 |
| 2 | ಬಿ.ಕಾಂ. | ಕಡ್ಡಾಯ ವಿಷಯಗಳು | 40 |

**ಸದರಿ ವಿಷಯವನ್ನು ದಿನಾಂಕ:13.08.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

ತತ್ಸಂಬಂಧ, ಸೂಚಿತ ವಿಷಯವನ್ನು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ಹರಿಯಬ್ಬೆಗೆ ಸಂಬಂಧಿಸಿದಂತೆ 2024–25ನೇ ಸಾಲಿನಲ್ಲಿ ಈ ಮೇಲ್ಕಂಡ ಪದವಿ ಕೋರ್ಸುಗಳಿಗೆ ಅನುಮೋದನೆ ನೀಡಲಾಗಿರುವ ವಿಷಯವನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.07(e)–(09/24) |

## –:ಟಿಪ್ಪಣಿ:–

**ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು – ಇಲ್ಲಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ಕೈಗೊಂಡಿರುವ ಕುರಿತು.**

ಉಲ್ಲೇಖ:
1. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು–ಇವರ ಪತ್ರ ಸಂ:ಸ.ಪ್ರ.ದ.ಕಾ./145/2024–25 ದಿನಾಂಕ:23.07.2024
2. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು–ಇವರ ಪತ್ರ ಸಂ:ಸ.ಪ್ರ.ದ.ಕಾ./125/2024–25 ದಿನಾಂಕ:02.08.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:03.09.2024

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ವಿಶ್ವವಿದ್ಯಾನಿಲಯದ ನಿಗದಿತ ದಿನಾಂಕದೊಳಗೆ ಸಂಯೋಜನಾ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಳಂಬದ ಕುರಿತು ಪರಿಶೀಲಿಸಿದ ತರುವಾಯ ಉಲ್ಲೇಖಿತ(2)ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದ್ದು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ನೀಡಿರುತ್ತದೆ.

ತತ್ಸಂಬಂಧ, ಸದರಿ ಕಾಲೇಜಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿದ್ದರಿಂದ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ 2024–25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                        ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.07(f)–(09/24) |

## –:ಟಿಪ್ಪಣಿ:–

ವಿಷಯ: ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ – ಇಲ್ಲಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ಕೈಗೊಂಡಿರುವ ಕುರಿತು.

ಉಲ್ಲೇಖ:
1. ಪ್ರಾಂಶುಪಾಲರು, ಎಂ.ಬಿ.ಆರ್. ಸಿರಿಗೆರೆ – ಇವರ ಪತ್ರ ಸಂ:ಎಂಬಿಆರ್‌ಡಿಸಿ/2024 ದಿನಾಂಕ:03.08.2024
2. ಪ್ರಾಂಶುಪಾಲರು, ಎಂ.ಬಿ.ಆರ್. ಸಿರಿಗೆರೆ – ಇವರ ಪತ್ರ ಸಂ: ದಿನಾಂಕ:29.08.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:03.09.2024

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ವಿಶ್ವವಿದ್ಯಾನಿಲಯದ ನಿಗದಿತ ದಿನಾಂಕದೊಳಗೆ ಸಂಯೋಜನಾ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಳಂಬದ ಕುರಿತು ಪರಿಶೀಲಿಸಿದ ತರುವಾಯ ಉಲ್ಲೇಖಿತ(2)ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದ್ದು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ನೀಡಿರುತ್ತದೆ.

ತತ್ಸಂಬಂಧ, ಸದರಿ ಕಾಲೇಜಿನ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜಾದ ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ – ಇವರು 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ತಡವಾಗಿ ಸಂಯೋಜನಾ ಪ್ರಕ್ರಿಯೆಗಳಿಗೆ ಮನವಿ ಸಲ್ಲಿಸಿದ್ದರಿಂದ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು, ದಿನಾಂಕ:06.09.2024ರಂದು ಸದರಿ ಕಾಲೇಜಿಗೆ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಿ ಸಂಯೋಜನಾ ಕಾರ್ಯವನ್ನು ಪೂರ್ಣಗೊಳಿಸಿ 2024–25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅವಕಾಶ ಕಲ್ಪಿಸಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.08(a)–(09/24) |

# –:ಟಿಪ್ಪಣಿ:–

ವಿಷಯ: **2024–25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳಲ್ಲಿ ಸಮ ಮತ್ತು ಬೆಸ ಸೆಮಿಸ್ಟರ್ ಪರೀಕ್ಷಾ ಕ್ರಮವನ್ನು ಜಾರಿಗೊಳಿಸುವ ಕುರಿತು.**

*******

ರಾಜ್ಯ ಸರ್ಕಾರವು, ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಏಕರೂಪವಾಗಿ ಜಾರಿಗೊಳಿಸಲಾದ (NEP) UUCMS ಪದ್ಧತಿಯನುಸಾರ ಸ್ನಾತಕ ಪದವಿಗಳಲ್ಲಿ **ಸಮ ಮತ್ತು ಬೆಸ ಸೆಮಿಸ್ಟರ್‌ಗಳ** ಪರೀಕ್ಷೆಗಳನ್ನು ಒಟ್ಟಾಗಿ ನಡೆಸಲು ಅವಕಾಶಗಳಿರುವುದಿಲ್ಲ. ಈ ಕ್ರಮವನ್ನು ರಾಜ್ಯದ ಇತರೆ ಎಲ್ಲಾ ವಿಶ್ವವಿದ್ಯಾನಿಲಯಗಳು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಅಳವಡಿಸಿಕೊಂಡು ಪಾಲಿಸಲಾಗುತ್ತಿದೆ.

ಅದರಂತೆ, ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಪದವಿ ಪರೀಕ್ಷೆಗಳಿಗೆ ಈ ಕ್ರಮವನ್ನು ಈಗಾಗಲೇ ಜಾರಿಗೊಳಿಸಲಾಗಿದ್ದು, ಪ್ರಸ್ತುತ ಸ್ನಾತಕೋತ್ತರ ಪದವಿಯ ಸಮ ಮತ್ತು ಬೆಸ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಒಟ್ಟಾಗಿ ನಡೆಸಲಾಗುವ ಕ್ರಮವನ್ನು ರದ್ದುಪಡಿಸಿ, 2024–25ನೇ ಶೈಕ್ಷಣಿಕ ಸಾಲಿನಿಂದ ನಡೆಸಲಾಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ **ಸಮ ಮತ್ತು ಬೆಸ ಸೆಮಿಸ್ಟರ್‌ಗಳ** ಪರೀಕ್ಷೆಗಳನ್ನು ಶೈಕ್ಷಣಿಕ ವೇಳಾಪಟ್ಟಿಯನುಸಾರ ನಡೆಸಬೇಕಾಗಿರುತ್ತದೆ.

ತತ್ಸಂಬಂದ, ಈ ವಿಷಯವನ್ನು ದಿನಾಂಕ:27.09.2024ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಏಕರೂಪವಾಗಿ ಜಾರಿಗೊಳಿಸಲಾಗಿದ್ದ (NEP) UUCMS ಪದ್ಧತಿಯನುಸಾರ – ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿಯ ಸಮ ಮತ್ತು ಬೆಸ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಒಟ್ಟಾಗಿ ನಡೆಸಲಾಗುವ ಕ್ರಮವನ್ನು ರದ್ದುಪಡಿಸಿ, 2024–25ನೇ ಶೈಕ್ಷಣಿಕ ಸಾಲಿನಿಂದ ನಡೆಸಲಾಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ **ಸಮ ಮತ್ತು ಬೆಸ ಸೆಮಿಸ್ಟರ್‌ಗಳ** ಪರೀಕ್ಷೆಗಳನ್ನು ಶೈಕ್ಷಣಿಕ ವೇಳಾಪಟ್ಟಿಯನುಸಾರ ನಡೆಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.08(b)-(೮9/24) |

## -:ಟಿಪ್ಪಣಿ:-

**ವಿಷಯ: 2024-25ನೇ ಶೈಕ್ಷಣಿಕ ಸಾಲಿಗೆ ಪರೀಕ್ಷಾ ಶುಲ್ಕ ಪರಿಷ್ಕರಣೆ ಮಾಡುವ ಕುರಿತು.**

*******

ವಿಶ್ವವಿದ್ಯಾನಿಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ನಿಗಧಿಪಡಿಸಲಾಗಿರುವ ವಿವಿಧ ಪರೀಕ್ಷಾ ಶುಲ್ಕಗಳನ್ನು **2024-25ನೇ ಶೈಕ್ಷಣಿಕ ಸಾಲಿನಿಂದ 10% ರಷ್ಟು** ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಪಟ್ಟಿ ಮಾಡಲಾಗಿರುವಂತೆ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಸಂಬಂಧ, ಈ ವಿಷಯವನ್ನು ದಿನಾಂಕ:27.09.2024 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## ಅನುಬಂಧ-1

| | | 2023-24ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | | | | 2023-24ನೇ ಸಾಲಿಗೆ 10% ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | | | | |
|---|---|---|---|---|---|---|---|---|---|---|---|---|---|
| | | Graduate Courses | | | | | | Graduate Courses | | | | | |
| Sl. No. | Particulars | BA | B.Sc. | B.Com. | BBA/ BCA/ BSW | B.Ed. | B.P.Ed. | BA | B.Sc. | B.Com. | BBA/ BCA/ BSW | B.Ed. | B.P.Ed. |
| 1 | Application Fee | 100 | 100 | 100 | 100 | 100 | 100 | 110 | 110 | 110 | 110 | 110 | 110 |
| 2 | Marks Card Fee (Per Semester) | 185 | 185 | 185 | 185 | 240 | 205 | 204 | 204 | 204 | 204 | 264 | 226 |
| 3 | I to VI Semester Whole Exam (per semester) | 565 | 715 | 615 | 955 | 1060 | 1155 | 622 | 787 | 677 | 1051 | 1166 | 1271 |
| 4 | Per Paper Theory (Reapter) | 170 | 170 | 170 | 200 | 220 | 240 | 187 | 187 | 187 | 220 | 242 | 264 |
| 5 | Per Practical (Reapter) | 130 | 130 | 0 | 130 | 0 | 155 | 143 | 143 | 0 | 143 | 0 | 171 |
| 6 | Practical (B.Ed. IV Semester) | | | | | 500 | | 0 | 0 | 0 | 0 | 550 | 0 |
| 7 | Practical (Reapter) (B.Ed. IV Semester) | | | | | 330 | | 0 | 0 | 0 | 0 | 363 | 0 |

| | | 2023-24ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | 2023-24ನೇ ಸಾಲಿಗೆ 10% ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | |
|---|---|---|---|---|---|---|---|
| | | Post-Graduate Courses | | | Post-Graduate Courses | | |
| Sl. No. | Particulars | Chemistry / M.Ed. / M.P.Ed. | MA/ M.Sc.,/ M.Com/ MSW | MBA/ MCA/ MVA | Chemistry / M.Ed. / M.P.Ed. | MA/ M.Sc.,/ M.Com/ MSW | MBA/ MCA/ MVA |
| 1 | Application Fee | 100 | 100 | 100 | 110 | 110 | 110 |
| 2 | Marks Card Fee (Per Semester) | 185 | 185 | 185 | 204 | 204 | 204 |
| 3 | I to IV Semester Whole Exam (per semester) | 1915 | 1695 | 1915 | 2107 | 1865 | 2107 |
| 4 | Per Paper Theory (Reapter) | 375 | 375 | 375 | 413 | 413 | 413 |
| 5 | Per Practical (Reapter) | 375 | 375 | 375 | 413 | 413 | 413 |

ಪು.ತಿ.ನೋ..

ಕುಲಸಚಿವರು

ಕುಲಪತಿಗಳು

## ಅನುಬಂಧ–2

| 2024–25ನೇ ಸಾಲಿಗೆ ಪರೀಕ್ಷಾ ಶುಲ್ಕ ಪರಿಷ್ಕರಣೆ ವಿವರಗಳು | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| | | 2023–24ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | | | | | 2024–25ನೇ ಸಾಲಿಗೆ 10%ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | | | | | |
| Sl. No. | Particulars | BA | B.Sc. | B.Com. | BBA/ BCA/ BSW | B.Ed. | B.P.Ed. | PG | BA | B.Sc. | B.Com. | BBA/ BCA/ BSW | B.Ed. | B.P.Ed. | PG |
| 1 | Paper Seeing / Photo Copy | 787 | 787 | 787 | 787 | 880 | 0 | 0 | 866 | 866 | 866 | 866 | 968 | 0 | 0 |
| 2 | Retotalling | 242 | 242 | 242 | 336 | 330 | 0 | 0 | 266 | 266 | 266 | 370 | 363 | 0 | 0 |
| 3 | Revaluation | 336 | 336 | 336 | 484 | 715 | 0 | 0 | 370 | 370 | 370 | 532 | 787 | 0 | 0 |
| 4 | Challenge Valuation (per paper) | 0 | 0 | 0 | 0 | 0 | 0 | 2200 | 0 | 0 | 0 | 0 | 0 | 0 | 2420 |

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ನಿಗಧಿಪಡಿಸಲಾಗಿರುವ ವಿವಿಧ ಪರೀಕ್ಷಾ ಶುಲ್ಕಗಳನ್ನು 2024–25ನೇ ಶೈಕ್ಷಣಿಕ ಸಾಲಿನಿಂದ 10% ರಷ್ಟು ಹೆಚ್ಚಿಸಿ ಪರಿಷ್ಕರಣೆ ಮಾಡಲಾದ ಅನುಬಂಧ–1 ಮತ್ತು ಅನುಬಂಧ–2 ರ ಪರೀಕ್ಷಾ ಶುಲ್ಕ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರು(ಆಡಳಿತ) ಪ್ರಭಾರೆ ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು